ಶ್ರೀ ಎ. ಡಿ. ಬಿಳಿಗೌಡ.—ಈವಿಚಾರದಲ್ಲಿ ಸರ್ಕಾರದವರು ವರದಿಯನ್ನು ಬೇಗ ತರಿಸಿಕೊಂಡು ಜಾರಿಗೆ ಕೊಟ್ಟರೆ ಕೊನೆಯಲ್ಲಿನ ಅಚ್ಚುಕಟ್ಟುದಾರರಿಗೆ ಅನುಕೂಲವಾಗುವುದಲ್ಲದೆ, ಬೆಳೆಗಳನ್ನು ಬದಲಾವಣೆ ಮಾಡುವುದರಿಂದ ಭೂಮಿಯ ಸಾರವೂ ನಷ್ಟವಾಗುವುದಿಲ್ಲ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ವರದಿಯನ್ನು ಬೇಗ ತರಿಸಿ ಅದನ್ನು ಅನುಷ್ಠಾನದಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ವರದಿಯನ್ನು ಬೇಗ ತರಿಸಿ ನೋಡುತ್ತೇವೆ.

ಶ್ರೀ ಎ. ಡಿ. ಬಿಳಿಗೌಡ.—ಈ ಪಂಪುಸೆಟ್ಟುಗಳನ್ನು ಜೋಡಿಸುತ್ತಿರುವುದರಿಂದ ಆಗುತ್ತಿರುವ ಅನಾಹುತವೆಂದರೆ ಕೊನೆಯಲ್ಲಿರುವ ಪ್ರದೇಶಕ್ಕೆ ನೀರು ಸರಬರಾಜು ಆಗದೆ ಅಲ್ಲಿನವರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದಕಾರಣ ಅನಧಿಕೃತವಾಗಿ ಪಂಪುಸೆಟ್ಟುಗಳನ್ನು ಇಟ್ಟುಕೊಂಡಿರುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಇರಿಗೇಷನ್ ಆಕ್ಟ್ ಪ್ರಕಾರ ಕ್ರಮ ಕೈಕೊಳ್ಳಬೇಕೆಂದು ಜಿಲ್ಲಾಧಿಕಾರಿಯವರಿಗೆ ಮತ್ತು ಎಕ್ಸಿಕ್ಯುಟಿವ್ ಇಂಜಿನಿಯರ್ ಅವರಿಗೆ ಬರೆದು ತಿಳಿಸಲಾಗಿದೆ.

ಶ್ರೀ ಸಿ. ಎನ್. ಪಾಟೀಲ್.—ಈಗಿರತಕ್ಕಂಥ ಇರಿಗೇಷನ್ ಆಕ್ಟ್ ಅಷ್ಟು ಶಕ್ತಿಯುತವಾಗಿಲ್ಲ ವಾದ್ದರಿಂದ ಕಾಯ್ದೆಯನ್ನು ಪರಿವರ್ತನೆ ವಿರುದ್ಧ ಕ್ರಮ ಕೈಕೊಳ್ಳುವುದು ಕಷ್ಟವಾಗಿದೆ; ಆದ ಕಾರಣ ಈಗಿರತಕ್ಕಂಥ ಆಕ್ಟ್‌ನ್ನು ತಿದ್ದುಪಡಿ ಮಾಡುವ ವಿಚಾರ ಸರ್ಕಾರಕ್ಕೆ ಏನಾದರೂ ಇದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ಆ ಅಭಿಪ್ರಾಯ ಇಲ್ಲ. ಅದು ಯೋಚನೆ ಮಾಡಿ ಹೇಳಬೇಕಾದ ವಿಷಯ.

ಶ್ರೀ ಎಂ. ಬಿ. ರಾಮಸ್ವಾಮಿ.—(ಅ) ಪ್ರಶ್ನೆಗೆ ಉತ್ತರವಾಗಿ 235 ಪಂಪುಸೆಟ್ಟುಗಳು ಎಂದು ಹೇಳಿದ್ದೀರಿ. ಇವರುಗಳು ಎಷ್ಟು ಕಾಲದಿಂದ ಅನಧಿಕೃತವಾಗಿ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ಮತ್ತು ಇದರ ಬಗ್ಗೆ ಅಲ್ಲಿಯ ಇತರರ ದೂರಿನಿಂದ ದೂರುಗಳು ಏನಾದರೂ ಬಂದಿದೆಯೇ ? ಬಂದಿದ್ದರೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಹಿಂದೆ ಹೇಗಾಗುತ್ತಿತ್ತು ಎಂದರೆ, ಅವರವರ ಜಮೀನು ಗಳಲ್ಲಿ ಬಾವಿ ತೆಗೆದಿದ್ದಾರೆಂದು ಶಾನುಭೋಗರು ಸರ್ಟಿಫಿಕೇಟ್ ಕೊಟ್ಟರೆ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಮಂಡಲಿಯವರು ವಿದ್ಯುಚ್ಛಕ್ತಿ ಕೊಡುತ್ತಿದ್ದರು. ಈ ರೀತಿ ಅನಧಿಕೃತವಾಗಿ ನೀರನ್ನು ಉಪಯೋಗಿಸಿಕೊಳ್ಳುತ್ತಿರುವುದು ಬಹುದಿನದಿಂದ ನಡೆದಿದೆ. ಇದನ್ನು ತಪ್ಪಿಸಬೇಕೆಂದು ಮತ್ತು ಪರ್ಮಿಷನ್ ಇಲ್ಲದೆ ಯಾರಾದರೂ ಪಂಪುಸೆಟ್ಟುಗಳನ್ನು ಇಟ್ಟುಕೊಂಡರೆ ಅದನ್ನು ತೆಗೆದುಹಾಕ ಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡು ಸಂಬಂಧಪಟ್ಟವರಿಗೆ ಸೂಚನೆ ಕೊಟ್ಟಿದೆ.

ಶ್ರೀ ಎ. ಡಿ. ಬಿಳಿಗೌಡ.—ಕೃಷ್ಣರಾಜಸಾಗರದ ನಾಲೆಯ ಮೇಲ್ಭಾಗದಲ್ಲಿ ಈ ರೀತಿ ಅಕ್ರಮ ವಾಗಿ ಪಂಪುಸೆಟ್ಟುಗಳನ್ನು ಇಟ್ಟುಕೊಂಡು ನೀರನ್ನು ಉಪಯೋಗ ಮಾಡುತ್ತಿರುವವರು ಯಾವ ವಿಧವಾದಂಥ ತೆರಿಗೆ ವಗ್ಗೈರೆಯನ್ನು ಸರ್ಕಾರಕ್ಕೆ ಕೊಡುತ್ತಿಲ್ಲವೆಂದು ನಾನು ಭಾವಿಸಿದ್ದೇನೆ. ಈ ರೀತಿ ಅನಧಿಕೃತವಾಗಿ ನೀರನ್ನು ಉಪಯೋಗ ಮಾಡುತ್ತಿರುವುದರಿಂದ ಕೊನೆಯಲ್ಲಿರುವ ಪ್ರದೇಶದ ವರಿಗೆ ತೊಂದರೆಯಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿರೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಕೊನೆಯ ಭಾಗದವರಿಗೆ ತೊಂದರೆಯಾಗುತ್ತಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ; ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

Promotion of Secretaries and Assistant Secretaries of Marketing Department to Gazetted Cadre

786. Sri T. TARE GOWDA (Kallambella).—

Will the Minister for Co-operation be pleased to state :—

(*a*) whether the Registrar of Co-operative Societies, the Chief Marketing Officer submitted to Government proposal regarding

promotion of some Secretaries and Assistant Secretaries of Marketing Department to the Gazetted Cadre ;

(*b*) whether the Government has sanctioned the proposal of the Chief Marketing Officer ;

(*c*) if not, when the Government would sanction the proposal ?

Sri A. SHANKARA ALVA (Minister for Co-operation).—

(*a*) Yes.

(*b*) No.

(*c*) Matter is under correspondence. Soon after receipt of a reply from the C.M.O., a decision will be taken.

ಶ್ರೀ ಟಿ. ತಾರೇಗೌಡ.—ರಿಜಿಸ್ಟ್ರಾರ್ ಅವರು ಶಿಫಾರಸ್ ಮಾಡಿದ್ದರೂ ಸಹ ಇನ್ನೂ ಮುಂಜೂರಾತಿ ಮಾಡದಿರುವುದಕ್ಕೆ ಕಾರಣವೇನು ? ಈ ಬಗ್ಗೆ ಪತ್ರವ್ಯವಹಾರ ನಡೆಯುತ್ತಿದೆ ಎಂದು ಹೇಳಿದ್ದೀರಿ ? ಇನ್ನು ಎಷ್ಟು ದಿವಸಗಳಲ್ಲಿ ಇದನ್ನು ಮಾಡಬೇಕೆಂದಿದ್ದೀರಿ ?

ಶ್ರೀ ಎ. ಶಂಕರ ಆಳ್ವ.—ರಿಜಿಸ್ಟ್ರಾರ್ ಅವರು ಕಳುಹಿಸಿಕೊಟ್ಟ ಸೀನಿಯಾರಿಟಿ ಲಸ್ಟ್‌ನಲ್ಲಿ ಕೆಲವರನ್ನು ಸೇರಿಸದೆ ಬಿಟ್ಟುಬಿಡಲಾಗಿತ್ತು ; ಮತ್ತು ಈ ಬಗ್ಗೆ ಹೈಕೋರ್ಟಿನವರು ಕೆಲವು ಆದೇಶಗಳನ್ನು ಕೊಟ್ಟಿದ್ದಾರೆ ; ಅದರ ಪ್ರಕಾರ ಸರಿಯಾಗಿ ಲಸ್ಟ್ ತಯಾರು ಮಾಡಬೇಕೆಂದು ಅವರಿಗೆ ವಾಪಸ್ ಕಳುಹಿಸಿಕೊಟ್ಟಿದೆ. ಅಲ್ಲಿಂದ ಬಂದ ಕೂಡಲೇ ಮಾಡುತ್ತೇವೆ.

ಶ್ರೀ ಟಿ. ತಾರೇಗೌಡ.—ಕೆಲವರು ಈಗ ಮ್ಯಾಗ್ನಿಮಮ್ ಸ್ಕೇಲನ್ನು ರೀಚ್ ಆಗಿ ಸ್ಟ್ಯಾಗ್‌ನೇಟ್ ಆಗಿದ್ದಾರೆ. ಆದ್ದರಿಂದ ಇದನ್ನು ಜಾಗ್ರತೆ ಪರ್ಯಾಲೋಚನೆ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇದರಲ್ಲಿ ಕೆಲವು ತಾಪತ್ರಯಗಳು ಬಂದಿವೆ. ಬೇರೆ ಕೆಲವರ ಹೆಸರುಗಳನ್ನು ಆ ಲಸ್ಟ್‌ನಲ್ಲಿ ಸೇರಿಸಬೇಕು ಮತ್ತು ಆ ಬಗ್ಗೆ ಪರ್ಯಾಲೋಚನೆ ಮಾಡಬೇಕೆಂದು ಹೈಕೋರ್ಟಿನವರು ಆದೇಶ ಕೊಟ್ಟಿದ್ದಾರೆ. ಅದರಂತೆ ಲಸ್ಟ್‌ನ್ನು ತಯಾರು ಮಾಡುವಂತೆ ನಾವು ರಿಜಿಸ್ಟ್ರಾರ್ ಅವರಿಗೆ ವಾಪಸ್ ಕಳಿಸಿಕೊಟ್ಟಿದ್ದೇವೆ. ಅವರಿಂದ ಬಂದ ಕೂಡಲೇ ಮಾಡುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಅದನ್ನು ನಿಧಾನ ಮಾಡುವುದರಿಂದ ಯಾವ ಒಬ್ಬ ಅಧಿಕಾರಿಗೆ ತಕ್ಷಣ ಪ್ರಮೋಷನ್ ಸಿಕ್ಕಬೇಕಾಗಿದೆಯೋ ಆದು ಸಿಕ್ಕುವುದಿಲ್ಲ. ಆದ್ದರಿಂದ ದಯವಿಟ್ಟು ಆ ಫೈಲನ್ನು ತರಿಸಿಕೊಂಡು ಅವರಿಗೆ ಪ್ರಮೋಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ನಾನು ಈಗಾಗಲೇ ಹೇಳಿದ ಹಾಗೆ ಕೆಲವರನ್ನು ಬಿಟ್ಟರೆ ಆ ಪಟ್ಟಿ ರದ್ದಾಗುತ್ತದೆ. ಅದರಿಂದ ತೊಂದರೆ ಒದಬಹುದು. ಈ ಬಗ್ಗೆ ಹೈಕೋರ್ಟಿನವರೂ ಕೂಡ ಆದೇಶವನ್ನು ಕೊಟ್ಟಿದ್ದಾರೆ. ಆದ್ದರಿಂದ ಎಲ್ಲರನ್ನೂ ಸೇರಿಸಿಕೊಂಡು ಲಸ್ಟ್ ಮಾಡಬೇಕಾಗುತ್ತದೆ. ಆ ಸೀನಿಯಾರಿಟಿ ಲಸ್ಟ್‌ನ್ನು ಶೀಘ್ರದಲ್ಲಿಯೇ ಮಾಡುತ್ತೇವೆ.

ಶ್ರೀ ಟಿ. ತಾರೇ ಗೌಡ.—ಇದು ಡಿಲೇ ಆಗಿರುವುದರಿಂದ ಅಧಿಕಾರಿಗಳಲ್ಲಿ ಕೆಲಸ ಮಾಡುವುದಕ್ಕೆ ನಿರುತ್ಸಾಹ ಬಂದಿದೆ. ಆದ್ದರಿಂದ ಇದನ್ನು ಆದಷ್ಟು ಜಾಗ್ರತೆ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಮಾನ್ಯ ಸದಸ್ಯರು ಹೇಳುವುದು ಸಹಜ. ಇದನ್ನು ಸರಿಯಾಗಿ ಮಾಡದಿದ್ದರೆ ಇದು ಕೋರ್ಟಿಗೆ ಹೋಗಿ ತೊಂದರೆಯಾಗುತ್ತದೆ. ಆದ್ದರಿಂದ ಈ ಬಗ್ಗೆ ಪ್ರಯತ್ನ ಮಾಡಿ ಕೂಡಲೇ ಮಾಡುತ್ತೇವೆ.